ಸಿಸಿ ನಂಃ 1668/2021
ಸಿಡ್ಬ್ಲ್ಯೂ 1/ ಪಿಡಬ್ಲ್ಯೂ 2

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 1668/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎಸ್ ಆರ್ ತೇಗೂರ |
| ತಂದೆಯ ಹೆಸರು | ಃ | ರುದ್ರಪ್ಪ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ಪಿ ಎಸ್ ಐ , ವಿದ್ಯಾಗಿರಿ ಪೋಲಿಸ್ ಠಾಣೆ |
| ವಾಸ ಸ್ಥಳ | ಃ | ಧಾರವಾಡ |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 02-06-2022**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು ಕಳೆದ 2 ವರ್ಷಗಳಿಂದ ವಿದ್ಯಾಗಿರಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ .ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 31-3-2021 ರಂದು ಮಃ 3.00 ಗಂಟೆಗೆ ನಾನು ತೇಜಸ್ವಿ ನಗರದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ನನ್ನ ಜೊತೆ ಚಾಸಾ-4 ರಿಂದ 6 ರವರು ಸಹ ಹಾಜರಿದ್ದರು . ಆಗ ನಾವು ಮಫ್ತಿ ಸಮವಸ್ತ್ರದಲ್ಲಿದ್ದು ತೇಜಸ್ವಿನಿ ನಗರದ ಉರ್ದು ಶಾಲೆ ಹತ್ತಿರ ಹೋಗುತ್ತಿದ್ದಾಗ ಒಬ್ಬ ವ್ಯಕ್ತಿ ಸದರಿ ಉರ್ದು ಸ್ಕೂಲ್ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದ ಮೇರೆಗೆ ಅದನ್ನು ಖಾತ್ರಿಪಡಿಸಿಕೊಂಡು ಚಾಸಾ-4 ಮತ್ತು 5 ರವರನ್ನು ವಾಚ್ ಮಾಡಲು ಹೇಳಿದ್ದೆ . ನಾವು ಸದರಿ ಸ್ದಳಕ್ಕೆ ಹೋದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲದಲ್ಲಿ ಸಣ್ಣ ಚೀಟಿಗಳಲ್ಲಿದ್ದ ಗಾಂಜಾಡ ಮಾರಾಟ ಮಾಡುವುದು ಕಂಡುಬಂದಿತ್ತು . ಆತನ ಹತ್ತಿರ ಒಂದು ಕಪ್ಪು ಬಣ್ಣದ ಬ್ಯಾಗ ಸಹ ಕಂಡುಬಂದಿತ್ತು . ಆಗ ನಾನು ಚಾಸಾ-4 ಮತ್ತು 5 ರವರನ್ನು ಅಲ್ಲಿಗೆ ಬಿಟ್ಟು ನಾನು ಠಾಣೆಗೆ ಬಂದು ಸರ್ಕಾರದ ಪರವಾಗಿ ದೂರು ನೀಡಿರುತ್ತೇನೆ .

ನಂತರ ನಾನು ತನಿಖಾಧಿಕಾರಿಯಾದ ಚಾಸಾ-16 ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇನೆ . ಅವರ ಜೊತೆ ಇಬ್ಬರು ಪಂಚರನ್ನು ಹಾಗೂ ನಮ್ಮ ಸಿಬ್ಬಂದಿಗಳನ್ನು ಸಹ ಕರೆದುಕೊಂಡು ಹೋದರು . ಅಲ್ಲಿ ಸದರಿ ವ್ಯಕ್ತಿ ಗಾಂಜಾ ಮಾರಾಟ ಮಾಡುತ್ತಿರುವುದು ಕಂಡುಬಂದಿತ್ತು . ಚಾಸಾ-16 ರವರು ಸದರಿ ಆರೋಪಿತನನ್ನು ವಶಕ್ಕೆ ಪಡೆದು ಆತನ ಹತ್ತಿರ ಇದ್ದ ಗಾಂಜಾ ಸಹ ವಶಪಡಿಸಿಕೊಂಡಿದ್ದರು . ಸದರಿ ಆರೋಪಿ ತನ್ನ ಹತ್ತಿರ ಗಾಂಜಾ ಇದೆ ಎಂದು ಹೇಳಿದ್ದ . ಆತ ಅದನ್ನು ಹಣಕ್ಕಾಗಿ ಮಾರಾಟ ಮಾಡಲು ತಂದಿದ್ದೇನೆ ಎಂದು ಹೇಳಿದ್ದ . ಆತನ ಹತ್ತಿರ ಅಂದಾಜು 590 ಗಾಂಜಾ ಚೀಟಿಗಳು ಇದ್ದವು . ಆತನ ಹೆಸರು ಸೋಮಶೇಖರ ತೋಡಕರ ಎಂದು ತಿಳಿದು ಬಂದಿತ್ತು . ಸದರಿ ಗಾಂಜಾ ಚೀಟಿಗಳನ್ನು ಖಾಜಿ ಎನ್ನುವ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ತೂಕ ಮಾಡಿ ಅದನ್ನು ಚಾಸಾ-16 ರವರ ತಾಬಾಕ್ಕೆ ಪಡೆದುಕೊಂಡಿದ್ದರು . ಸದರಿ ಚೀಟಿಗಳನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ ಮಾಡಿ ಠಾಣೆಗೆ ತಂದಿರುತ್ತೇವೆ . ಅದೇ ಕಾಲಕ್ಕೆ ಪಂಚನಾಮೆ ಸಹ ಮಾಡಿದ್ದರು . ಸದರಿ ಪಂಚನಾಮೆಗೆ ನಾನು ಸಹ ಸಹಿ ಮಾಡಿರುತ್ತೇನೆ . ಸದರಿ ಸಹಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-1 (ಬಿ) ಎಂದು ಗುರುತಿಸಲಾಯಿತು . ನಾನು ನೀಡಿರುವ ದೂರನ್ನು ನಿಶಾನೆ-ಪಿ-4 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-4 (ಎ) ಎಂದು ಗುರುತಿಸಲಾಯಿತು . ಅದನ್ನು ಹೊರತುಪಡಿಸಿ ಮತ್ತೇನು ಮಾಡಿದ್ದರು ಎಂದು ನನಗೆ ನೆನಪಿಲ್ಲ . ಪಂಚನಾಮೆ ಕಾಲಕ್ಕೆ ಫೋಟೋ ಸಹ ತೆಗೆದಿದ್ದರು . ಸದರಿ ಫೋಟೋಗಳು ನಿಶಾನೆ-ಪಿ-2 ಮತ್ತು 3 ರಲ್ಲಿರುವ ಫೋಟೋಗಳು ಆಗಿರುತ್ತವೆ . ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ . (ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿತನ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ .) ನಾನು ತನಿಖಾಧಿಕಾರಿಗಳ ಮುಂದೆ ನನ್ನ ಪುನರ್ ಹೇಳಿಕೆ ಸಹ ನೀಡಿದ್ದೇನೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎಂ ಓ -1 ರ ಕಪ್ಪು ಬಣ್ಣದ ಬ್ಯಾಗ್ ನೋಡಿ ಗುರುತಿಸಿರುತ್ತಾರೆ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಆ ದಿನ ನಾನು ಗಸ್ತು ಕರ್ತವ್ಯದಲ್ಲಿದ್ದಾಗ ನನಗೆ ಮಾಹಿತಿ ಬಂದ ನಂತರ ನಾನು ವಾಚ್ ಮಾಡಲು ಮಫ್ತಿ ಡ್ರೇಸ್ ನಲ್ಲಿ ಇದ್ದೆ ಎಂದರೆ ಸರಿ . ಚಾಸಾ-16 ರವರು, ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಬಂದಿದ್ದರು ಎಂದರೆ ಸರಿ . ಸದರಿ ಸ್ಥಳಕ್ಕೆ ತೂಕ ಮಾಡಲು ಚಾಸಾ-11 ರವರನ್ನು ಸಹ ಕರೆದುಕೊಂಡು ಹೋಗಿದ್ದೇವು ಎಂದರೆ ಸರಿ . ನಾವು ಸ್ಥಳಕ್ಕೆ ಹೋಗಿ ವಾಚ್ ಮಾಡಿದ ನಂತರ ತನಿಖಾಧಿಕಾರಿಗಳು ಆರೋಪಿ ಗಾಂಜಾ ಮಾರುತ್ತಿರುವುದನ್ನು ಖಾತ್ರಿಪಡಿಸಿಕೊಂಡು ನಂತರ ಚಾಸಾ-4 ಮತ್ತು 5 ರವರನ್ನು ಸಹ ಅವರ ಜೊತೆ ಸೇರಿಸಿಕೊಂಡಿದ್ದರು ಎಂದರೆ ಸರಿ . ಆರೋಪಿ ಉರ್ದು ಶಾಲೆಯ ಹತ್ತಿರ ಕಾಲೇಜನ ಒಂದು ಕಪ್ಪು ಬಣ್ಣದ ಬ್ಯಾಗ ಹಾಕಿಕೊಂಡು ನಿಂತವನನ್ನು ಚಾಸಾ-16 ರವರು ದಸ್ತಗಿರಿ ಮಾಡಿದ್ದರು ಎಂದರೆ ಸರಿ . ನಂತರ ತನಿಖಾಧಿಕಾರಿ ಆತನನ್ನು ವಿಚಾರಿಸಿದಾಗ ಆತ ತನ್ನ ಹೆಸತು ಸೋಮಶೇಖರ @ ಶಾಂತಾರಾಮ ತೋಡಕರ ಎಂದು ತಿಳಿಸಿದ್ದ ಎಂದರೆ ಸರಿ . ಆಗ ಚಾಸಾ-16 ರವರು ಆತನ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ಒಟ್ಟು 103 ಸಣ್ಣ ಗಾಂಜಾ ಚೀಟಿಗಳು ಸಿಕ್ಕಿದ್ದವು ಎಂದರೆ ಸರಿ . ನಾನು ನನ್ನ ಮುಖ್ಯವಿಚಾರಣೆಯಲ್ಲಿ 560 ಎಂದು ಹೇಳಿರುವುದು ತಪ್ಪು ಎಂದರೆ ಸರಿ . ಸದರಿ ಕಪ್ಪು ಬಣ್ಣದ ಒಂದು ಹಳದಿ ಬಣ್ಣದ ಒಂದು ಪ್ಲಾಸ್ಟಿಕ ಹ್ಯಾಂಡ ಬ್ಯಾಗ ಇತ್ತು ಎಂದರೆ ಸರಿ . ಅದರಲ್ಲಿ ಸಣ್ಣ ಸಣ್ಣ ಪ್ಲಾಸ್ಟಿಕ ಚೀಟಿಗಳಲ್ಲಿ ಒಣಗಿದ ಎಲೆ , ಕಾಂಡ ಮತ್ತು ಬೀಜಗಳು ಸೇರಿ , ಮಿಕ್ಸ ಮಾಡಿದ ಘಾಟು ವಾಸನೆಯುಳ್ಳ ಚೀಟಿಗಳು ಇದ್ದವು ಎಂದರೆ ಸರಿ . ಚಾಸಾ-16 ರವರು ಸದರಿ ವಸ್ತು ಗಾಂಜಾ ಎಂದು ಖಾತ್ರಿಪಡಿಸಿಕೊಂಡು ಅವುಗಳನ್ನು ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿ .

ಚಾಸಾ-9 ಪತ್ರಾಂಕಿತ ಅಧಿಕಾರಿಗಳು ಆರೋಪಿತನ ಅಂಗ ಶೋಧನೆ ಮಾಡಿದಾಗ ಆತನ ಪ್ಯಾಂಟ ಜೇಬಿನಲ್ಲಿ 5 ಗಾಂಜಾ ಸಣ್ಣ ಚೀಟಿಗಳು ಹಾಗೂ 560 ನಗದು ಹಣ ಸಿಕ್ಕಿದ್ದವು ಎಂದರೆ ಸರಿ . ಸದರಿ ಆರೋಪಿ ಸದರಿ ಗಾಂಜಾ ಚೀಟಿಗಳನ್ನು ರೂ. 6,000/- ಹಣ ನೀಡಿ ಬೇರೆಯವರಿಂದ ಖರೀದಿಸಿ ಮಾರಾಟ ಮಾಡಲು ನಿಂತಿರುವುದಾಗಿ ಹೇಳಿದ್ದ ಎಂದರೆ ಸರಿ.

ಈ ತೋರಿಸುತ್ತಿರುವ ಹಳದಿ ಬಣ್ಣದ ಬಾಹುಬಲಿ ಮುತ್ತಿನ್ ಎಂದು ಬರೆದಿರುವ ಹಳದಿ ಪ್ಲಾಸ್ಟಿಕ ಹ್ಯಾಂಡ ಬ್ಯಾಗ ಎಂ. ಓ-1 ರ ಬ್ಯಾಗನಲ್ಲಿ ಇತ್ತು ಎಂದರೆ ಸರಿ . ಅದೇ ರೀತಿ ಎಂ. ಓ-4 ರಲ್ಲಿರುವ ರೂ. 560/- ನಗದು ಹಣ ಸಹ ಅಲ್ಲಿ ಇತ್ತು ಎಂದರೆ ಸರಿ . ಸದರಿ

ಬ್ಯಾಗದಲ್ಲಿ 98 ಚೀಟಿಗಳು ಹಾಗೂ ಆರೋಪಿತನ ಬ್ಯಾಗನಲ್ಲಿ 5 ಚೀಟಿಗಳು, ಒಟ್ಟು 103 ಗಾಂಜಾ ಚೀಟಿಗಳು ಸಿಕ್ಕಿದ್ದವು ಎಂದರೆ ಸರಿ . ತನಿಖಾಧಿಕಾರಿಗಳು ಸದರಿ ಎಲ್ಲ ವಸ್ತುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮೂಲಕ ಜಪ್ತುಪಡಿಸಿಕೊಂಡು ಅವುಗಳಿಗೆ ಸೀಲ್ ಮತ್ತು ಸಹಿ ಅಳವಡಿಸಿದ್ದರು ಎಂದರೆ ಸರಿ . ತೂಕ ಮಾಡಿದಾಗ ಸದರಿ ಗಾಂಜಾ ಪ್ಯಾಕೇಟಗಳ ತೂಕ 890 ಗ್ರಾಂ ಆಗಿತ್ತು ಎಂದರೆ ಸರಿ . ಅವುಗಳ ಪೈಕಿ 15 ಚೀಟಿಗಳನ್ನು ಸ್ಯಾಂಪಲಗಾಗಿ ತೆಗೆದಿದ್ದರು ಎಂದರೆ ಸರಿ . ಉಳಿದ 88 ಚೀಟಿಗಳು ಪ್ರತ್ಯೇಕವಾಗಿ ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿ . ಎಂ. ಓ-1 ರಿಂದ 4 ಕ್ಕೆ ಚಾಸಾ-9 ಸಹ ಸಹಿ ಮಾಡಿದ್ದರು ಎಂದರೆ ಸರಿ . ಸದರಿ ಪಂಚನಾಮೆಯನ್ನು ಸಾಯಂಕಾಲ 5.30 ರಿಂದ 7.00 ಗಂಟೆಯವರೆಗೆ ಸ್ಥಳದಲ್ಲಿಯೇ ಮಾಡಿ ನನ್ನ ಸಹಿ ಸಹ ಪಡೆದಿದ್ದರು ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎ.ಎಂ ವಕೀಲರಿಂದ**

ನಿಶಾನೆ-ಪಿ-4 ರ ದೂರು ಟೈಪ ಮಾಡಿರುವ ದೂರು ಎಂದರೆ ಸರಿ . ಅದನ್ನು ನಮ್ಮ ಠಾಣೆಯಲ್ಲಿಯೇ ಟೈಪ ಮಾಡಿಸಿದ್ದೆ . ಅದನ್ನು ಟೈಪ ಮಾಡಿದವರ ಸಹಿ ಅದಕ್ಕೆ ಇಲ್ಲ ಎಂದರೆ ಸರಿ . ನಮ್ಮ ಸಿಬ್ಬಂದಿಗಳು ತಯಾರಿಸಿರುವ ದೂರಿಗೆ ನಾನು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ . ನನಗೆ ಮಾಹಿತಿ ಮಃ 3.00 ಗಂಟೆಗೆ ಬಂದಿತ್ತು . ಸದರಿ ಬಾತ್ಮಿ ಬಗ್ಗೆ ನಾನು ಠಾಣಾ ಡೈರಿಯಲ್ಲಿ ನಮೂದಿಸಿಲ್ಲ . ಆದರೆ ದೂರು ನೀಡಿರುತ್ತೇನೆ . ನನಗೆ ಯಾವುದೇ ಬಾತ್ಮಿ ಬಂದಿರಲಿಲ್ಲ ಎಂದರೆ ಸರಿಯಲ್ಲ . ನನಗೆ ಬಂದ ಬಾತ್ಮಿ ಬಗ್ಗೆ ನನ್ನ ಮೇಲಾಧಿಕಾರಿಗಳಿಗೆ ತಕ್ಷಣವೇ ತಿಳಿಸಿರಲಿಲ್ಲ . ಆದರೆ ಠಾಣೆಗೆ ಬಂದು ತಿಳಿಸಿರುತ್ತೇನೆ . ನನಗೆ ಆ ರೀತಿ ಬಾತ್ಮಿ ಬಂದಿರದೇ ಇದುದ್ದರಿಂದ ಮೇಲಾಧಿಕಾರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ .

ನಾನು ಗಸ್ತು ಕರ್ತವ್ಯದಲ್ಲಿದ್ದಾಗ ಸಮವಸ್ತ್ರದಲ್ಲಿದ್ದೆ ಎಂದರೆ ಸರಿಯಲ್ಲ . ಆರೋಪಿ ಗಾಂಜಾ ಮಾರುತಿದ್ದ ಬಗ್ಗೆ ಬಾತ್ಮಿ ಬಂದ ನಂತರ ಮೇಲಾಧಿಕಾರಿಗೆ ಕರೆದುಕಕೊಂಡು ಹೋಗಿ ಆತನನ್ನು ದಸ್ತಗಿರಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಚಾಸಾ-16 ರವರನ್ನು ಕರೆದುಕೊಂಡು ದಸ್ಟಗಿರಿ ಮಾಡಿದ್ದೇವು ಎಂದು ಉತ್ತರಿಸಿರುತ್ತಾರೆ . ಚಾಸಾ-16 ಸಹ

ಪಿ. ಎಸ್ .ಐ ಎಂದರೆ ಸರಿ . ಅವರು ನನ್ನ ಮೇಲಾಧಿಕಾರಿ ಅಲ್ಲ ಎಂದರೆ ಸರಿ . ಮಾಹಿತಿ ಬಂದ ನಂತರ ನಾನು ಸ್ಥಳಕ್ಕೆ ಹೋದಾಗ ಮಃ 3.30 ಗಂಟೆ ಆಗಿತ್ತು . ಅಲ್ಲಿಂದ ನಾನು ಠಾಣೆಗೆ ಬಂದಾಗ 3.45 ಗಂಟೆ ಆಗಿತ್ತು . ಆ ದಿನ ನಾನು ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ . ಆ ದಿನ ಆರೋಪಿ ನನಗೆ ಸಿಕ್ಕಿರಲಿಲ್ಲ ಎಂದರೆ ಸರಿಯಲ್ಲ . ನಾನು ದೂರು ನೀಡಿದ ನಂತರ ಚಾಸಾ-16 , ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-9 ಪತ್ರಾಂಕಿತ ಅಧಿಕಾರಿಗಳ ಮುಂದೆ ತೂಕ ಮಾಡಿ ಆರೋಪಿನಿಂದ ಗಾಂಜಾ ಜಪ್ತುಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ನನಗೆ ಪಾಟೀಸವಾಲಿನಲ್ಲಿ ತಿಳಿಸಿರುವ ವಿಷಯಗಳು ಅವರಿಗೆ ಹೇಳಿದ ನಂತರ ಗೊತ್ತಾಯಿತು ಎಂದರೆ ಸರಿ . ಸಾಕ್ಷಿ ನಂತರ ಸ್ವತಃ ಮುಂದುವರೆದು ಮೊದಲು ಸಹ ಗೊತ್ತಾಗಿತ್ತು ಎಂದು ಉತ್ತರಿಸಿರುತ್ತಾರೆ .

ಸಾಮಾನ್ಯವಾಗಿ ಎಂ.ಓ -1 ರ ತರಹದ ಬ್ಯಾಗಗಳು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ . ಆದರೆ ಸದರಿ ಬ್ಯಾಗ ಆರೋಪಿತನಿಂದ ಜಪ್ತುಪಡಿಸಿಕೊಳ್ಳಲಾಗಿತ್ತು . ಎಂ ಓ -4 ರಲ್ಲಿರುವ ಹಣ ಮುಖಬೆಲೆ ಬಗ್ಗೆ ಪಂಚನಾಮೆಯಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಅದು ತನಿಖಾಧಿಕಾರಿಗೆ ಕೇಳಬೇಕು ಎಂದು ಉತ್ತರಿಸಿರುತ್ತಾರೆ . ಜಪ್ತಾದ ಮುದ್ದೆ ಮಾಲಿಗೂ ಹಾಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನಮ್ಮ ಠಾಣೆಯಲ್ಲಿದ್ದ ದೇವಾರಸುದಾರ ಮಾಲನ್ನು ಉಪಯೋಗಿಸಿಕೊಂಡು ಆರೋಪಿತನ ವಿರುದ್ದ ಸುಳ್ಳು ಪ್ರಕರಣದ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ